**ಇಲೆಕ್ಷನ ಪಿಟಿಷನ್‌ನಂ. 1/2018**
**ಪಿ.ಡಬ್ಲೂ 1**

**ದಿನಾಂಕಃ 27-11-2018 ರಂದು ಸದ್ರಿ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ** ಎದುರುದಾರ 1 ರವರ ಪರವಾಗಿ ಶ್ರೀ ಜಿ.ಎಸ್.ಕೆ. ವಕೀಲರಿಂದಃ

ಎದುರುದಾರರು ವಾರ್ಡ ನಂ. 18 ರಲ್ಲಿ ಪಟ್ಟಣ ಪಂಚಾಯತಿ ಸದಸ್ಯೆಯಾಗಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ ಎಂದರೆ ಸರಿ. ನಾನು ಈ ಅರ್ಜಿಯಲ್ಲಿ ಹೇಳಿದ ಸಂಗತಿಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ. ಎದುರುದಾರು ಇವರನ್ನು ಅತಿಥಿ ಉಪನ್ಯಾಸಕರಾಗಿ ನೇಮಿಸಿದ ಬಗ್ಗೆ, ನೇಮಕಾತಿ ಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ದಾಖಲಾತಿ ನೇಮಕಾತಿ ಪತ್ರ ಅಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿ ನನ್ನ ಕೋರಿಕೆಯ ಮೇರೆಗೆ ಪ್ರಾಂಶುಪಾಲರು ಕೊಟ್ಟ ಪತ್ರ ಎಂದರೆ ಸಾಕ್ಷಿ ಹೇಳುತ್ತಾರೆ ಎದುರುದಾರು ವೇತನ ಪಡೆದ ವಿವರದ ಪತ್ರ ಕೊಟ್ಟಿರುತ್ತಾರೆ. ಚುನಾವಣಾ ಅಧಿಕಾರಿಯವರು ಎದುರುದಾರರ ಅರ್ಜಿಯನ್ನು ಕಾನೂನುಬದ್ಧವಾಗಿ ಸ್ವೀಕರಿಸಿ ತಮ್ಮ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮಹಿಳೆಯರಿಗೆ ಎರಡು ಹೆಸರು ಎರಡು ವಿಳಾಸ ಇರುತ್ತದೆ ಎಂದರೆ ಸರಿ. ಎದುದಾರರು ಚುನಾವಣೆಯಲ್ಲಿ ಗೆದ್ದ ಕಾರಣ ದ್ವೇಷದಿಂದ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇನ್ನುಳಿದ ಪಾಟೀ ಸವಾಲನ್ನು ಸರಕಾರಿ ವಕೀಲರು ಮಾಡಿದ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವದಾಗಿ ಹೇಳುತ್ತಾರೆ.

ಮರು ವಿಚಾರಣೆ ಇರುವುದಿಲ್ಲಾ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಹಿ ಇದೆ
ಹಿರಿಯ ಸಿವಿಲ್ ಜಡ್ಜ್, ಯಲ್ಲಾಪುರ,
ಪೀಠಾಸೀನ ಮುಂಡಗೋಡ